

# ರುದ್ರಭೀಕರ ಡೆತ್ ವ್ಯಾಲಿ

ಅಮೆರಿಕದ ರುದ್ರಭೀಕರ ಡೆತ್ ವ್ಯಾಲಿ ರಾಷ್ಟ್ರೀಯವನದಲ್ಲಿನ ಸುತ್ತಾಟ ದಣಿವು ತರಿಸುತ್ತದೆ. ಆದರೆ, ಆ ಉದ್ಯಾನವನದ ವೀಕ್ಷಣೆ ಜೀವಮಾನದ ಅವಿಸ್ಮರಣೀಯ ಕ್ಷಣಗಳ ಪಟ್ಟಿಗೆ ಸೇರ್ಪಡೆಯಾಗುವುದರ ಜೊತೆಗೆ, ಹಲವು ಪ್ರಾಕೃತಿಕ ವಿಸ್ಮಯಗಳನ್ನು ನೋಡುವ 'ಪರಿಸರ ಪಾಠ'ದ ಅವಕಾಶವನ್ನೂ ಒದಗಿಸುತ್ತದೆ.

■ **ಡಾ. ಡಿ.ಎಸ್. ಕೃಷ್ಣ ರಾವ್**

ಅಮೆರಿಕದ 'ಡೆತ್ ವ್ಯಾಲಿ ರಾಷ್ಟ್ರೀಯ ಉದ್ಯಾನವನ' ಕ್ಯಾಲಿಫೋರ್ನಿಯಾ ಮತ್ತು ನೆವಡಾ ರಾಜ್ಯಗಳ ಗಡಿಯಲ್ಲಿದೆ. ಉದ್ಯಾನವನದ ವಿಸ್ತೀರ್ಣ 13,650 ಚ.ಕಿ.ಮೀ.ನಷ್ಟು ವಿಶಾಲವಾಗಿದೆ. ಆ ಪರಿಸರದ ಶೇ. 90 ಭಾಗದಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸದೆ, ಅದು ಇದ್ದಂತೆಯೇ ದುರ್ಗಮ ರೂಪದಲ್ಲಿ ಕಾಪಾಡಿಕೊಂಡಿದ್ದಾರೆ. 1994ರಲ್ಲಿ ಆ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆಯಾಯಿತು.

ಡೆತ್‌ವ್ಯಾಲಿ ಉದ್ಯಾನವನದ ವಾರ್ಷಿಕ ಸರಾಸರಿ ಮಳೆ ಕೇವಲ 38 ಮಿ.ಮೀ. ಆಗಿದೆ. ಕೆಲವು ವರ್ಷಗಳು ಮಾಪನಕ್ಕೆ ಎಟಕದಷ್ಟು ಕಡಿಮೆ ವರ್ಷಧಾರೆ ಅಲ್ಲಿರುತ್ತದೆ. ಒಂದಾನೊಂದು ಕಾಲದಲ್ಲಿ, ಇದೇ ಪ್ರದೇಶ ಸಾಗರವಾಗಿತ್ತಂತೆ. ಪ್ರಸಿದ್ಧ 'ಸ್ಟಾರ್ ವಾರ್ಸ್'ನ ಎರಡು ಸಂಚಿಕೆಗಳ ಚಿತ್ರೀಕರಣ ಇಲ್ಲಿ ನಡೆದಿದೆ. ಈ ಸ್ಥಳದಿಂದ ಲೋಕಪ್ರಖ್ಯಾತ ಹೂವರ್ ಅಣೆಕಟ್ಟೆಗೆ ಮತ್ತು ಜೂಜು ಮೋಜಿಗೆ ಪ್ರಸಿದ್ಧವಾದ ಲಾಸ್ ವೆಗಾಸ್‌ಗೆ ಸುಮಾರು ಎರಡು ಗಂಟೆ ಪ್ರಯಾಣವಷ್ಟೆ.

ಡೆತ್ ವ್ಯಾಲಿಯು ವಿಪರೀತ ಉಷ್ಣ ಮತ್ತು ಒಣ ಪ್ರದೇಶ. ಉತ್ತರ ಅಮೆರಿಕದ ಸಮುದ್ರಮಟ್ಟದಿಂದ ಅತಿ ತಗ್ಗು ಪ್ರದೇಶ ಇಲ್ಲಿದೆ. ಬೇಸಿಗೆಯ ಉತ್ತುಂಗದಲ್ಲಿ 56.7 ಡಿಗ್ರಿ ಸೆಲ್ಷಿಯಸ್ ತಾಪಮಾನ ತಲುಪಿರುವ ದಾಖಲೆ ಇದೆ. ಇದು ಪ್ರಪಂಚದ ವಾಯು ತಾಪಮಾನದ ಗರಿಷ್ಟ ದಾಖಲೆ ಅನ್ನಿಸಿಕೊಂಡಿದ್ದರೂ, ಇದನ್ನು ಪ್ರಶ್ನಿಸುವವರೂ ಇದ್ದಾರೆ. ಬೇಸಿಗೆಯ ಜೂನ್‌ನಿಂದ ಆಗಸ್ಟ್ ತಿಂಗಳುಗಳಲ್ಲಿ 45 ರಿಂದ 49 ಡಿಗ್ರಿ ಸೆಲ್ಷಿಯಸ್ ಸರ್ವೇ ಸಾಮಾನ್ಯ. ಉಷ್ಣವಲಯದಲ್ಲಿರುವ ನಮಗೇ 45 ಡಿಗ್ರಿ ಸೆಲ್ಷಿಯಸ್ ತಾಪಮಾನ ಸಹಿಸಿಕೊಳ್ಳಲು ಅಸಾಧ್ಯ. ಹಾಗಿರುವಾಗ, ಶೀತವಲಯದಲ್ಲಿ ಇರುವವರಿಗೆ ಈ ತಾಪಮಾನ ಕಾದ ಕಾವಲಿಯೇ ಸರಿ.

ಕಿಲೋಮೀಟರ್‌ಗಟ್ಟಲೆ ಅಂಕುಡೊಂಕಿಲ್ಲದ, ಗುಂಡಿ, 'ರಸ್ತೆ ಉಬ್ಬು'ಗಳಿಲ್ಲದ ನೇರ ರಸ್ತೆ,